# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 306 (450) |
| ಉತ್ತರಿಸಬೇಕಾದ ದಿನಾಂಕ | : | 22.12.2022 |
| ಉತ್ತರಿಸುವ ಸಚಿವರು | : | ಮುಖ್ಯಮಂತ್ರಿಗಳು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯದ ಪಂಚಾಯತ್ ರಾಜ್ ಎಂಜಿನೀಯರಿಂಗ್ ಕಛೇರಿಯಲ್ಲಿ ನಡೆದಿದೆ ಎನ್ನಲಾದ ಹಣ ದುರುಪಯೋಗ ಪ್ರಕರಣವು ಪ್ರಸ್ತುತ ಯಾವ ಹಂತದಲ್ಲಿದೆ; ಸದರಿ ಹಗರಣದ ತನಿಖೆಯನ್ನು ಸಿ.ಓ.ಡಿ.ಗೆ ವಹಿಸಲಾಗಿದೆಯೇ; (ಸಂಪೂರ್ಣ ವಿವರ ನೀಡುವುದು) | ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕಛೇರಿ, ಮಂಡ್ಯ ಇಲ್ಲಿನ ಹಣ ದುರುಪಯೋಗದಲ್ಲಿ ಭಾಗಿಯಾಗಿರುವ ಅಧಿಕಾರಿ / ನೌಕರರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವ.ನಿ.ಮೇ.) ನಿಯಮಗಳ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ಕೈಗೊಳ್ಳಲಾಗಿದೆ. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 101 ಇಎನ್‌ಕ್ಯೂ 2019, ದಿನಾಂಕ: 21.09.2021ರಲ್ಲಿ ಶ್ರೀ ಜಿ.ಎಸ್.ಸೋಮಶೇಖರ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು, ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದ್ದು, ಇಲಾಖಾ ವಿಚಾರಣೆ ಪ್ರಗತಿಯಲ್ಲಿರುತ್ತದೆ.<br><br>ಮುಂದುವರೆದು, ಸದರಿ ಹಗರಣದ ತನಿಖೆಯನ್ನು ನಡೆಸಲು ಸರ್ಕಾರದ ಆದೇಶ ಸಂ: ಒಇ 65 ಸಿಓಡಿ 2020, ದಿನಾಂಕ:23.12.2020ರಲ್ಲಿ ಸಿ.ಐ.ಡಿ. ಯವರಿಗೆ ವಹಿಸಲಾಗಿದೆ. |

| | | |
|---|---|---|
| ಆ) | ಹಣ ದುರುಪಯೋಗ ಪ್ರಕರಣದಲ್ಲಿ ಭಾಗಿ ಆಗಿದ್ದಾರೆ ಎನ್ನಲಾದ ಎಷ್ಟು ಮಂದಿ ಅಧಿಕಾರಿ, ನೌಕರರನ್ನು ಅಮಾನತ್ತು ಮಾಡಲಾಗಿದೆ; ಇಲಾಖಾ ವಿಚಾರಣೆ ಎದುರಿಸುತ್ತಿರುವ ಆರೋಪಿತ ಅಧಿಕಾರಿ ಮತ್ತು ನೌಕರರ ಸಂಖ್ಯೆ ಎಷ್ಟು; (ವಿವರ ನೀಡುವುದು) | ಹಣ ದುರುಪಯೋಗ ಪ್ರಕರಣದಲ್ಲಿ ಭಾಗಿಯಾಗಿರುವ 05 ಮಂದಿ ನೌಕರರನ್ನು ಅಮಾನತ್ತು ಮಾಡಲಾಗಿದೆ. ಪ್ರಕರಣದಲ್ಲಿ ಒಟ್ಟಾರೆ 10 ಜನ ಅಧಿಕಾರಿ / ನೌಕರರುಗಳ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲಾಗಿದೆ. ಸದರಿಯವರುಗಳ ವಿವರಗಳನ್ನು **ಅನುಬಂಧದಲ್ಲಿ** ಇರಿಸಲಾಗಿದೆ. |
| ಇ) | ಇಲಾಖಾ ವಿಚಾರಣೆ ಎದುರಿಸುತ್ತಿರುವ ಆರೋಪಿತ ಅಧಿಕಾರಿ ಮತ್ತು ನೌಕರರನ್ನು ಸಾಕ್ಷಿದಾರರನ್ನಾಗಿ ಪರಿಗಣಿಸಲು ಅವಕಾಶ ಇದೆಯೇ; (ಪರಿಗಣಿಸಿದ್ದಲ್ಲಿ, ವಿವರ ನೀಡುವುದು) | ಸಾಮಾನ್ಯವಾಗಿ ಇಲಾಖಾ ವಿಚಾರಣೆ ಪ್ರಕರಣಗಳಲ್ಲಿ ಆಪಾದಿತರುಗಳನ್ನು ಸಾಕ್ಷಿಗಳ ನ್ನಾಗಿ ಪರಿಗಣಿಸಲಾಗುವುದಿಲ್ಲ. ಆದರೆ ಪ್ರಸಕ್ತ ಪ್ರಕರಣದಲ್ಲಿ ಆಪಾದಿತರಾಗಿರುವ ಶ್ರೀ ಪ್ರಕಾಶ್ ಗೋಪಾಲಕೃಷ್ಣ ಪವ್ಹಾರ್, ಹಿಂದಿನ ಕಾರ್ಯಪಾಲಕ ಇಂಜಿನಿಯರ್ (ಹಾಲಿ ನಿವೃತ್ತ) ಇವರು ಮಂಡ್ಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಸದರಿ ಕಛೇರಿಯ ಕಾರ್ಯವೈಖರಿಯ ಬಗ್ಗೆ ಆಕ್ಷೇಪಿಸಿ ತನಿಖೆ / ವಿಚಾರಣೆ ನಡೆಸುವ ಬಗ್ಗೆ ಪತ್ರ ಬರೆದ ಹಿನ್ನಲೆಯಲ್ಲಿ ಸದರಿಯವರನ್ನು ಸಹ ಒಬ್ಬ ಸಾಕ್ಷಿದಾರರೆಂದು ಪರಿಗಣಿಸಲಾಗಿದೆ. |
| ಈ) | ಇಲಾಖಾ ವಿಚಾರಣೆಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು; ನಿಗದಿತ ಅವಧಿಯೊಳಗೆ ಪೂರ್ಣಗೊಳಿಸದಿರಲು ಇರುವ ಕಾರಣಗಳೇನು; | ಸರ್ಕಾರದ ಸುತ್ತೋಲೆ ಸಂ: ಸಿಆಸುಇ/18/ ಸೇಇವಿ/2021, ದಿನಾಂಕ:04.10.2021 ರನ್ವಯ ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ ವರದಿ ಸಲ್ಲಿಸಲು 04 ತಿಂಗಳ ಕಾಲಮಿತಿಯನ್ನು ನಿಗದಿಪಡಿಸಲಾಗಿದೆ.<br><br>ಇಲಾಖಾ ವಿಚಾರಣೆ ಪ್ರಕ್ರಿಯೆಯು ಅರೆ ನ್ಯಾಯಿಕ ನಡವಳಿಯಾಗಿದ್ದು, ಎಲ್ಲಾ ನಿಗಧಿತ ವಿಧಿವಿಧಾನಗಳನ್ನು ಅನುಸರಿಸಿ ನಡೆಸುವುದು ಅವಶ್ಯವಿರುತ್ತದೆ. ಒಂದು ವೇಳೆ ಇಲಾಖಾ ವಿಚಾರಣೆ |

| | | |
|---|---|---|
| | | ಪ್ರಕ್ರಿಯೆಯಲ್ಲಿ ಯಾವುದೇ ಲೋಪವಾದಲ್ಲಿ ಇಡೀ ನಡವಳಿಯೇ ಅಸಿಂಧುವಾಗುವ ಸಾಧ್ಯತೆಯಿರುತ್ತದೆ. ಅಲ್ಲದೇ ವಿಚಾರಣಾ ಪ್ರಕ್ರಿಯೆಯ ಕುರಿತು ನ್ಯಾಯಾಲಯ ದಲ್ಲಿ ಪ್ರಶ್ನೆ ಮಾಡುವ ಸಾಧ್ಯತೆ ಹೆಚ್ಚಾಗಿರುವು ದರಿಂದ ನಿರ್ದಿಷ್ಟ ಕಾಲಮಿತಿಯೊಳಗೆ ಇಲಾಖಾ ವಿಚಾರಣೆ ಪೂರ್ಣಗೊಳಿಸಲು ಕಷ್ಟಸಾಧ್ಯ ವಾಗುತ್ತದೆ.<br><br>ಅಲ್ಲದೇ ಪ್ರಕರಣದಲ್ಲಿ ಒಟ್ಟು 10 ಆಪಾದಿತರುಗಳಿದ್ದು, ಎಲ್ಲಾ ಆಪಾದಿತರುಗಳ ವಿರುದ್ಧದ ಆರೋಪಗಳ ಕುರಿತು ವ.ನಿ.ಮೇ. ನಿಯಮಗಳ ನಿಯಮ 11ರಡಿ ನಿರ್ದಿಷ್ಟಪಡಿಸಿರುವ ವಿಧಿವಿಧಾನಗಳನ್ನು ಅನುಸರಿಸಿ ಇಲಾಖಾ ವಿಚಾರಣೆ ಪೂರ್ಣಗೊಳಿಸಲು ನಿಗಧಿತ ಕಾಲಾವಧಿಗಿಂತ ಹೆಚ್ಚಿನ ಸಮಯಾವಕಾಶ ಬೇಕಾಗುತ್ತದೆ. |
| ಉ) | ಇಲಾಖಾ ವಿಚಾರಣೆ ಎದುರಿಸುತ್ತಿರುವ ಅಧಿಕಾರಿ / ನೌಕರರ ಪೈಕಿ ಯಾರಿಗಾದರೂ ಪದೋನ್ನತಿ ನೀಡಲಾಗಿದೆಯೇ; ನೀಡಿದ್ದಲ್ಲಿ, ಅವರುಗಳ ವಿವರ ಒದಗಿಸುವುದು; (ಇಲಾಖಾ ವಿಚಾರಣೆ ಆರಂಭಿಸಿದ ಮತ್ತು ಮುಂಬಡ್ತಿ ನೀಡಿದ ಆದೇಶದ ಪ್ರತಿ ಒದಗಿಸುವುದು) — | ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯ ವತಿಯಿಂದ ನೀಡಿರುವುದಿಲ್ಲ.<br><br>ಆದರೆ ಆಪಾದಿತರಲ್ಲಿ ಒಬ್ಬರಾದ ಶ್ರೀ ಚಂದ್ರಹಾಸ, ಕಾ.ಇಂ., ಇವರಿಗೆ ಅವರ ಮಾತೃ ಇಲಾಖೆಯಾದ ಲೋಕೋಪಯೋಗಿ ಇಲಾಖೆಯು ಮಾನ್ಯ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ: 2159/2021 ಹಾಗೂ ನಿಂದನಾ ಅರ್ಜಿ ಸಂಖ್ಯೆ: 4104/2021 ಗಳಿಗೆ ಸಂಬಂಧಿಸಿದಂತೆ ಕ್ರಮವಾಗಿ ದಿನಾಂಕ: 29.03.2021 ಹಾಗೂ 03.06.2022 ಗಳಂದು ನೀಡಿದ ಆದೇಶಗಳನ್ವಯ ಅಧಿಸೂಚನೆ ಸಂಖ್ಯೆ: ಲೋಇ 59 ಸೇಎಸು 2020 ದಿ: 19.07.2022 ರಲ್ಲಿ ಅಧೀಕ್ಷಕ ಇಂಜಿನಿಯರ್ ಹುದ್ದೆಗೆ ಕ.ನಾ.ಸೇ. ನಿಯಮಾವಳಿಗಳ ನಿಯಮ-32ರಡಿ |

| | | |
|---|---|---|
| | | ಸ್ವತಂತ್ರ ಪ್ರಭಾರದಲ್ಲಿರಿಸಿ ಆದೇಶಿಸಿದೆ (ಪ್ರತಿ ಲಗತ್ತಿಸಿದೆ). |
| ಊ) | ಮಹಾಲೇಖಪಾಲರ ಕಚೇರಿ, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಮಂಡ್ಯ ಹಾಗೂ ಜಿಲ್ಲಾ ಪಂಚಾಯತ್, ಮಂಡ್ಯ ಇವರು ನಡೆಸಿದ ಲೆಕ್ಕ ಪರಿಶೋಧನೆಯಲ್ಲಿ ಗುರುತಿಸಿದ ನ್ಯೂನತೆಗಳಾವುವು? (ವಿವರ ನೀಡುವುದು) | ಮಂಡ್ಯ ಜಿಲ್ಲಾ ಪಂಚಾಯತ್ ಕಚೇರಿಯು ಮಂಡ್ಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕಚೇರಿಯಲ್ಲಿನ ವಿವಿಧ ಲೋಪಗಳ ಕುರಿತು ಪರಿಶೋಧನೆ ನಡೆಸಿ ಸಲ್ಲಿಸಿರುವ ವರದಿಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.<br><br>ಮಹಾಲೇಖಪಾಲರ ಕಚೇರಿ ಅಥವಾ ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಮಂಡ್ಯ ಇವರು ಮಂಡ್ಯ ಪಂ.ರಾ.ಇಂ. ವಿಭಾಗ ಕಚೇರಿಯ ಲೆಕ್ಕ ತಪಾಸಣೆ ಕೈಗೊಂಡಿರುವುದಿಲ್ಲ. |

ಗ್ರಾಅಪ 189 ಜಿಪಅ 2022

**(ಬಸವರಾಜ ಬೊಮ್ಮಾಯಿ)**
ಮಾನ್ಯ ಮುಖ್ಯಮಂತ್ರಿಯವರು

19

## ಅನುಬಂಧ

**ಮಂಡ್ಯದ ಪಂಚಾಯತ್ ರಾಜ್ ಇಂಜಿನಿಯರಿಂಗ್ ಕಛೇರಿಯ ಹಣ ದುರುಪಯೋಗ ಪ್ರಕರಣದಲ್ಲಿ ಭಾಗಿಯಾಗಿ ಅಮಾನತ್ತುಗೊಂಡ ಅಧಿಕಾರಿ / ನೌಕರರುಗಳ ವಿವರ**

1. ವಿ.ಪಿ. ಆನಂದ ಕುಮಾರ್, ಹಿಂದಿನ ಲೆಕ್ಕಾಧೀಕ್ಷಕ, ಪಂ.ರಾ.ಇಂ. ವಿಭಾಗ, ಮಂಡ್ಯ.
2. ಬಿ.ಆರ್. ಚಂದ್ರಶೇಖರ್, ಹಿಂದಿನ ಪ್ರದಸ. ಮತ್ತು ನಗದು ಸಹಾಯಕ, ಪಂ.ರಾ.ಇಂ. ವಿಭಾಗ, ಮಂಡ್ಯ.
3. ಟಿ.ಲಕ್ಷ್ಮೀಕಾಂತ, ಹಿಂದಿನ ದ್ವಿ.ದ.ಸ ಮತ್ತು ನಗದು ಸಹಾಯಕ
4. ಬಿ.ರಮೇಶ್, ಹಿಂದಿನ ಪ್ರ.ದ.ಸ. ಮತ್ತು ನಗದು ಸಹಾಯಕ
5. ದಿ|| ಹೆಚ್.ಎಲ್. ನಾಗರಾಜು, ಗ್ರೂಪ್ 'ಡಿ' ನೌಕರರು.

**ಮಂಡ್ಯದ ಪಂಚಾಯತ್ ರಾಜ್ ಇಂಜಿನಿಯರಿಂಗ್ ಕಛೇರಿಯ ಹಣ ದುರುಪಯೋಗ ಪ್ರಕರಣದಲ್ಲಿ ಭಾಗಿಯಾಗಿ ವಿಚಾರಣೆ ಎದುರಿಸುತ್ತಿರುವ ಅಧಿಕಾರಿ / ನೌಕರರುಗಳ ವಿವರ**

1. ಪ್ರಕಾಶ್ ಗೋಪಾಲ ಕೃಷ್ಣ ಪವ್ಹಾರ, ಹಿಂದಿನ ಕಾ.ಇಂ., ಪಂರಾಇಂ.ವಿಭಾಗ, ಮಂಡ್ಯ (ಹಾಲಿ ನಿವೃತ್ತ)
2. ರಾಮಕೃಷ್ಣ, ಹಿಂದಿನ ಪ್ರಭಾರಿ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಮಂಡ್ಯ
3. ಚಂದ್ರಹಾಸ, ಹಿಂದಿನ ಕಾರ್ಯಪಾಲಕ ಅಭಿಯಂತರರು.
4. ಎಸ್.ವಿ.ಪದ್ಮನಾಭ, ಕಾರ್ಯಪಾಲಕ ಅಭಿಯಂತರರು, ಪಂರಾಇಂ.ವಿಭಾಗ, ಮಂಡ್ಯ
5. ಎಸ್.ಕುಮಾರ್, ಹಿಂದಿನ ಕಾ.ಇಂ.,
6. ಬಿ.ಆರ್. ಚಂದ್ರಶೇಖರ್, ಹಿಂದಿನ ಪ್ರದಸ. ಮತ್ತು ನಗದು ಸಹಾಯಕ, ಪಂ.ರಾ.ಇಂ. ವಿಭಾಗ, ಮಂಡ್ಯ.
7. ಟಿ.ಲಕ್ಷ್ಮೀಕಾಂತ, ಹಿಂದಿನ ದ್ವಿ.ದ.ಸ ಮತ್ತು ನಗದು ಸಹಾಯಕ
8. ಆರ್.ರಾಜು, ಹಿಂದಿನ ಲೆಕ್ಕಾಧೀಕ್ಷಕ
9. ಬಿ.ರಮೇಶ್, ಹಿಂದಿನ ಪ್ರ.ದ.ಸ. ಮತ್ತು ನಗದು ಸಹಾಯಕ
10. ವಿ.ಪಿ. ಆನಂದ ಕುಮಾರ್, ಹಿಂದಿನ ಲೆಕ್ಕಾಧೀಕ್ಷಕ, ಪಂ.ರಾ.ಇಂ. ವಿಭಾಗ, ಮಂಡ್ಯ.